ಓ.ಎಸ್.183/2021 ಡಿ.ಡಬ್ಲು-2
*ಬಸಲಿಂಗಪ್ಪ ತಂದೆ ಹನುಮಂತಪ್ಪ*

ದಿನಾಂಕ 10-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲು ಶ್ರೀ ಕೆ.ಕೆ.ವಿ ವಕೀಲರಿಂದ :-</u>**

ಭೀಮವ್ವ ನನ್ನ ದೊಡ್ಡವ್ವ. ಅವರ ಮನೆತನದ ಬಗ್ಗೆ ನನಗೆ ಗೊತ್ತಿರುತ್ತದೆ. ನಾನು ಭೀಮವ್ವಳ ಪರವಾಗಿ ಸಾಕ್ಷಿ ಹೇಳಲು ಬಂದಿರುತ್ತೇನೆ. ವಾದಿ ಮದನ್ ರವರಿಗೆ ಖರೀದಿ ಪತ್ರ ಮಾಡಿಕೊಡುವಾಗ ಭೀಮವ್ವಳ ಮನೆಯಲ್ಲಿ ಹನುಮಂತ, ಭೀಮವ್ವ ಮತ್ತು ಸಿದ್ದವ್ವ ಇದ್ದರು. ಈ ಮೂವರನ್ನು ಹೊರತುಪಡಿಸಿ ಅವರ ಕುಟುಂಬದಲ್ಲಿ ಬೇರೆ ಯಾರೂ ಇರಲಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಹನುಮಂತನ ಹೆಂಡತಿ ಮತ್ತು ಮಕ್ಕಳು ಮಸ್ಕಿಯಲ್ಲಿದ್ದರು. ಹನುಮಂತನ ಹೆಂಡತಿ ಮತ್ತು ಮಕ್ಕಳು ಹಾಜರು ಇರಲಿಲ್ಲ ಎಂದರೆ ಸರಿ. ಖರೀದಿ ಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ಖರೀದಿ ಪತ್ರಕ್ಕೆ ಯಾರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಖರೀದಿ ಪತ್ರಕ್ಕೆ ಭೀಮವ್ವ ಮತ್ತು ಹನುಮಂತ ಮಾತ್ರ ಸಹಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಹನುಮಂತನ ಹೆಂಡತಿ ಮತ್ತು ಮಕ್ಕಳನ್ನು ಮನೆಯಿಂದ ಹೊರ ಹಾಕಿದ್ದರಿಂದ ಅವರು ಮಸ್ಕಿಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಖರೀದಿ ಪತ್ರ ಆಗುವಾಗ ಒಟ್ಟು ಆಸ್ತಿ ಹನುಮಂತನ ಹೆಸರಿನಲ್ಲಿ ಇತ್ತು. ಒಟ್ಟು ಆಸ್ತಿ 26 ಎಕರೆ ಇರುತ್ತದೆ.

2. ಶಿವಶಂಕ್ರಪ್ಪ ತೀರಿಕೊಂಡ ಮೇಲೆ ಮನೆಯ ಜವಾಬ್ದಾರಿಯನ್ನು ಭೀಮವ್ವಳೆ ನೋಡಿಕೊಳ್ಳಿತ್ತಿದ್ದಳು ಎಂದರೆ ಸರಿಯಲ್ಲ. ಹನುಮಂತ ನೋಡಿಕೊಳ್ಳುತ್ತಿದ್ದನು. ಖರೀದಿ ಪತ್ರ ಮಾಡುವಾಗ ಹನುಮಂತನಿಗೆ ಯಾವುದೇ ಹಣದ ಅಡಚಣೆ ಇರಲಿಲ್ಲ ಎಂದರೆ ಸರಿಯಲ್ಲ. ಹನುಮಂತನ ಅಕ್ಕ ಸಿದ್ದಮ್ಮಳನ್ನು ಅದೇ ಊರಲ್ಲಿ ಮದುವೆ ಮಾಡಿ ಕೊಟ್ಟಿರುತ್ತಾರೆ. ಆಕೆ ಗಂಡನ ಜೊತೆ ಬಾಳುವೆ ಮಾಡದೆ ತಾಯಿಯ ಜೊತೆ ಇದ್ದಳು ಎಂದರೆ ಸರಿಯಲ್ಲ. ಸಿದ್ದಮ್ಮನ ಹತ್ತಿರ ಅವರ ತಾಯಿ ಭೀಮವ್ವ ಇದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಭೀಮವ್ವಳೆ ತನ್ನ ಮನೆತನದ ಜವಾಬ್ದಾರಿ ನೋಡಿಕೊಳ್ಳುತ್ತಿದ್ದಳು ಎಂದರೆ ಸರಿಯಲ್ಲ. ಭೀಮವ್ವ ಹಣದ ಅಡಚಣೆಗಾಗಿ ತನ್ನ ಪಾಲಿನ ಆಸ್ತಿಯನ್ನು ವಾದಿ ಮದನನಿಗೆ ಹನುಮಂತನ ಮೂಲಕ ಮಾರಾಟ ಮಾಡಿಸಿರುತ್ತಾಳೆ ಎಂದರೆ ಸರಿಯಲ್ಲ. ಹನುಮಂತನ ಹೆಂಡತಿ ಮತ್ತು ಮಕ್ಕಳು ನ್ಯಾಯಾಲಯದಲ್ಲಿ ಪಾಲು ವಿಬಾಗ ದಾವೆ ಮಾಡಿ ಡಿಕ್ರಿ ಪಡೆದಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ದಾವಾ ಆಸ್ತಿ ಸಿದ್ದಮ್ಮರವರ ಕಬ್ಜಾದಲ್ಲಿರುತ್ತದೆ ಎನ್ನುತ್ತಾರೆ. ಭೀಮವ್ವ ಮತ್ತು ಸಿದ್ದಮ್ಮನ ಮಾತು ಕೇಳಿ ಹನುಮಂತನ ತನ್ನ ಪಾಲಿನ ಆಸ್ತಿ ಮಾತ್ರ ಮಾಡಿದ್ದಾನೆ ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಪತ್ರಕ್ಕೆ ಭೀಮವ್ವಳ ಸಹಿ ಇದ್ದರೂ ಸಹ ಆಕೆ ಮಾರಾಟ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ರಿಂದ 7 ನೇ ಪ್ರತಿವಾದಿಯರಿಗೆ ಈ ಖರೀದಿ ಪತ್ರದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.